International Journal of Kannada Research 2023; 9(1): 235-242




International Journal of Kannada Research
www.kannadajournal.com

**ISSN: 2454–5813**
IJKR 2023; 9(1): 235-242
© 2023 IJKR
www.kannadajournal.com
Received: 15-12-2022
Accepted: 19-01-2023

**ಮಹೇಶ ಎ. ಎಸ್**
ಮುಖ್ಯಸ್ಥರು, ಕನ್ನಡ ವಿಭಾಗ, ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮೀ ಪುರಂ, ಮೈಸೂರು, ಕರ್ನಾಟಕ, ಭಾರತ

**Corresponding Author:**
**ಮಹೇಶ ಎ. ಎಸ್**
ಮುಖ್ಯಸ್ಥರು, ಕನ್ನಡ ವಿಭಾಗ, ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮೀ ಪುರಂ, ಮೈಸೂರು, ಕರ್ನಾಟಕ, ಭಾರತ

# ಬುದ್ಧ ಭಾರತ: ಹೊಸ ಸಾಧ್ಯತೆಗಳು

**ಮಹೇಶ ಎ. ಎಸ್**

**ಪೀಠಿಕೆ**

ಬುದ್ಧ ಭಾರತ ಕಾವ್ಯವು ಕನ್ನಡ ಸಾರಸ್ವತ ಲೋಕಕ್ಕೆ ಕವಿ ನಾಗರಾಜ್ ತಲಕಾಡು ಅವರ ಅತ್ಯಮೂಲ್ಯ ಕೊಡುಗೆ ಎಂದರೆ ತಪ್ಪಾಗದು. ಕಾವ್ಯವು ಸರಳ ಆಧುನಿಕ ಚಂಪೂ ಶೈಲಿಯಲ್ಲಿದ್ದು, ಒಂಬತ್ತು ಅಧ್ಯಾಯಗಳನ್ನು ಹೊಂದಿದೆ. ಪ್ರತಿ ಅಧ್ಯಾಯಕ್ಕೂ ಹಂಬಲವೆಂದು ಹೆಸರಿಟ್ಟಿರುವ ಕವಿಯು ಸದಾ ಆರೋಗ್ಯಪೂರ್ಣ ಸುಸ್ಥಿರ ಶಾಂತಿಯುತ ಸಮಸಮಾಜದ ನಿರ್ಮಾಣಕ್ಕೆ ಹಂಬಲಿಸುವ ಒಳಮನದ ತುಡಿತ ಮಿಡಿತವಿಲ್ಲಿ ಹಂಬಲದ ರೂಪ ಕಂಡಿದೆ.

ಈಗಾಗಲೇ ಎರಡು ಮಹಾಯುದ್ಧಗಳನ್ನು ಕಂಡಿರುವ ನಾವು ಮೂರನೆಯ ಮಹಾಯುದ್ಧದ ಹೊಸ್ತಿಲಿನಲ್ಲಿ ಬಂದು ನಿಂತಿರುವುದಷ್ಟೇ ಅಲ್ಲದೆ, ಅದಕ್ಕೆ ಬೇಕಾದ ಸಕಲ ಸಿದ್ಧತೆಗಳನ್ನು ಇಲ್ಲಿನ ಬಡ,ಬಲಿಷ್ಠ ರಾಷ್ಟ್ರಗಳೆಲ್ಲವು ಮಾಡಿಕೊಂಡಿದ್ದು, ಯುದ್ಧವನ್ನು ದೀವಳಿಗೆ ಹಬ್ಬದ ಸಂಭ್ರಮಿಸಲು ಉತ್ಸುಕರಾಗಿ ನಾಮುಂದು ತಾಮುಂದೆಂದು ನಿಂತಿವೆ.ಒಬ್ಬರನೊಬ್ಬರು ಕೊಂದು, ಒಂದು ದೇಶವನ್ನು ಮತ್ತೊಂದು ದೇಶವು ಮುಕ್ಕಿ, ಒಬ್ಬರ ಬದುಕನ್ನೊಬ್ಬರು ಹಾಳುಗೆಡವಿ ಮೆರೆವ ಈ ವಿಕೃತಿಯಾಟಕ್ಕೆ ಯುದ್ಧವೆಂದು ಕರೆದುಕೊಂಡಿದ್ದೇವೆ. ಇಡೀ ಜಗತ್ತಿಗೆ ಶಾಂತಿ, ಸೌಹಾರ್ದತೆಯ ಪಾಠ ಹೇಳುತ್ತಿದ್ದ ನಾವುಗಳು ಕೂಡ ಇಂದು ಯುದ್ಧದ ಹಪಹಪಿತನದಲ್ಲಿ ಇರುವುದು ನಿಜಕ್ಕೂ ವಿಪರ್ಯಾಸವೇ ಸರಿ. ರಾಜಪ್ರಭುತ್ವದಲ್ಲಿದ್ದು ನಂತರದಲ್ಲಿ ಬ್ರಿಟಿಷರದಾಸ್ಯಕ್ಕೆ ಸಿಕ್ಕು, ಅದನ್ನು ದಾಟಿ ಪ್ರಜಾಪ್ರಭುತ್ವಕ್ಕೆ ಬಂದು ನಿಂತರು ಕೂಡ ನಮ್ಮೊಳಗಿನ್ನು ಈ ಯುದ್ಧದ ಸದ್ದು ಗುಡುಗುಟ್ಟುತ್ತಲೇ ಇದೆ. ಇದರಿಂದ ಹೊರಬರಲು ನಾವುಗಳೆಂದೂ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತಲೇ ಇಲ್ಲವೆನ್ನಬಹುದು.

ಬುದ್ಧ ಹುಟ್ಟಿದ ನಾಡಿನವರಾದ ನಾವು ಪ್ರಜಾಪ್ರಭುತ್ವದ ಹೆಸರಿನಲ್ಲಿ ರಾಜಪ್ರಭುತ್ವವನ್ನೇ ಮತ್ತೆ ಮತ್ತೆ ಪ್ರತಿಪಾದಿಸಲು ಹೊರಟ್ಟಿದ್ದೇವೆಯೇ ಹೊರತು ಶಾಂತಿಪ್ರಭುತ್ವದ ಹಾದಿಗೆಂದು ಹೊರಳಿ ಮರಳಿದವರಲ್ಲ. ನಾವೆಲ್ಲರು ಆಂತರ್ಯದಲಿ ಹೊಡಿ, ಬಡಿ, ಕೊಲ್ಲು, ಗೆಲ್ಲು, ಕಬಳಿಸು, ಆಕ್ರಮಿಸಿ ಎನ್ನುವ ಹಿಂಸೆಯ ಮಂತ್ರಗಳನು ಜಪಿಸುತ್ತಿದ್ದರೂ, ಬಾಹ್ಯದಲ್ಲಿ ಬರೀ ತೋರಿಕೆಗೆ ಬೂಟಾಟಿಕೆಯ ಶಾಂತಿ ಮಂತ್ರವನ್ನು ಬಡಬಡಿಸುತ್ತಿರುವ

ಈ ಹೊತ್ತಿನಲ್ಲಿ ಜಗದೊದ್ಧಾರಕ ಬುದ್ಧನ ತತ್ವಾದರ್ಶಗಳ ಅವಶ್ಯಕತೆ ಮತ್ತು ಅನಿವಾರ್ಯತೆ ಎದ್ದು ಕಾಣುತ್ತಿದೆ. ಈ ನಿಟ್ಟಿನಲ್ಲಿ ಹೊಸದೊಂದು ಅರಿವಿನ ಬೆಳಕು ಚೆಲ್ಲಿರುವ ನಾಗರಾಜ್ ತಲಕಾಡು ಅವರ ಬುದ್ಧ ಭಾರತ ಕಾವ್ಯವು ನಮಗೆಲ್ಲ ಅರಿವಿನ ಒಳಗಣ್ಣು ತೆರಸುವಲ್ಲಿ ಸಫಲವಾಗಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಇಂತಹ ಯುದ್ಧ ಪರಂಪರೆಯಿಂದ ಇಲ್ಲಿನ ಪ್ರಕೃತಿ ಮತ್ತು ಜೀವ ಜಗತ್ತಿಗೆ ಬಂದೊದಗಬಹುದಾದ ಅನಾಹುತಗಳ ದುರಂತಗಳಿಂದ ನಮ್ಮನ್ನು ಪಾರು ಮಾಡಲು, ನಮ್ಮೊಳಗೆ ಬುದ್ಧನ ಶಾಂತಿ ಪರಂಪರೆಯನ್ನು ಬಿತ್ತಿ ಬೆಳೆವ ಕಾರ್ಯವನ್ನು ಮಾಡಿ, ನಮ್ಮನ್ನೆಲ್ಲ ಬುದ್ಧ ಪ್ರೀತಿಯ ಶಾಂತಿತೋಟದಲ್ಲಿನ ಹೂವುಗಳಾಗಿಸಲು ಕವಿ ನಾಗರಾಜ್ ತಲಕಾಡು ಅವರು ಈ ಕಾವ್ಯದ ಮೂಲಕ ಪ್ರಯತ್ನಿಸಿರುವುದು ನಿಜಕ್ಕೂ ಶ್ಲಾಘನೀಯವೇ ಸರಿ.

ಜಗದ ಶಾಂತಿಗಾಗಿ, ಜನರ ಪ್ರೀತಿಗಾಗಿ ಅರಿವಿನ ದೀವಿಗೆಯ ಹಿಡಿದ ಕಾರಣ್ಯಮೂರ್ತಿಗಳಾದ ಬುದ್ಧ, ಬಸವ, ಮಂಟೇಸ್ವಾಮಿ, ಸಾಹುಮಹಾರಾಜ, ನಾಲ್ವಡಿ ಕೃಷ್ಣರಾಜ ಒಡೆಯರು, ಸ್ವಾಮಿ ವಿವೇಕಾನಂದ, ಜ್ಯೋತಿಭಾಪುಲೆ, ಅಂಬೇಡ್ಕರ್ ಮುಂತಾದವರನ್ನು ನಾಗರಾಜ್ ತಲಕಾಡುರವರು ತನ್ನ ಕವಿನುಡಿಯಲ್ಲಿ ಸ್ಮರಿಸಿರುವುದು ಅವರ ತತ್ವಗಳೇ ನಮ್ಮಗಳ ಬದುಕಿಗೆ ಸತ್ವವಾಗಬೇಕೆಂಬ ಕಾರಣಕ್ಕಾಗಿ, ಈ ಮೂಲಕ ಕವಿಯು ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಎಂದು ಸಾರಿದ ಕವಿ ಕುವೆಂಪು ಅವರ ತತ್ವದ ಆಧಾರದ ಮೇಲೆ ಕಾವ್ಯ ನಿರ್ಮಾಣ ಮಾಡಿದ್ದಾರೆ. ಯುದ್ಧವೆಂದರೆ ಬರೀ ಕೊಲ್ಲುವ ಮತ್ತು ಗೆಲ್ಲುವ ಆಟವಲ್ಲ, ಗೆದ್ದ ಮೇಲೂ ತನ್ನೆದುರು ಹೋರಾಡಿ ಸೋತವರನ್ನ ಸಂತೈಸಿ, ಸಮಾಧಾನ ಪಡಿಸಿ, ಬದುಕಲು ಅವಕಾಶ ಕಲ್ಪಿಸಿಕೊಡುವ ಮಾನವೀಯತೆಯ ಒಂದು ಭಾಗವೂ ಹೌದು.ಭರತ ಬಾಹುಬಲಿಯರನ್ನು ಉದಾಹರಿಸುವುದರ ಮೂಲಕ ಕವಿ ಮೂರು ಯುದ್ಧಗಳಲ್ಲಿ ಅಣ್ಣನ ವಿರುದ್ಧ ಗೆಲುವು ಸಾಧಿಸಿದ ಬಾಹುಬಲಿಯು ಗೆದ್ದ ಖುಷಿಯಲ್ಲಿ ಬೀಗದೆ, ಸಹೋದರ ಪ್ರೀತಿಗೆ ಕರಗಿ ಬಾಗಿದ್ದನ್ನು ಓದುಗರ ಮುಂದೆ ತೆರೆದಿಟ್ಟಿದ್ದಾರೆ.

ಜಗದಲಿ ಸಾಮಾನ್ಯರು ನೆಮ್ಮದಿಯಾಗಿ ಬಾಳಬೇಕೆಂದರೆ ದೇಶವಾಳುವವರು ಮೊದಲು ತಮ್ಮೊಳಗೆ ದೊಡ್ಡತನಗಳನ್ನು ಮೈಗೂಡಿಸಿಕೊಳ್ಳಬೇಕೆಂದು ತಿಳಿಸುವುದರ ಮೂಲಕ ಪ್ರಸಕ್ತ ಸನ್ನಿವೇಶದಲ್ಲಿ ದೇಶ, ವಿದೇಶಗಳಲ್ಲಿ ಜರುಗುತ್ತಿರುವ ವಿದ್ಯಾಮಾನಗಳತ್ತ ದೃಷ್ಟಿ ನೆಟ್ಟಿರುವುದು ಕಾವ್ಯದ ವಿಶೇಷವೆನಿಸುತ್ತದೆ.

ವ್ಯಾಸಭಾರತದಿಂದ ಆದಿಕವಿ ಪಂಪ ವಿಕ್ರಮಾರ್ಜುನವಿಜಯವನ್ನು, ಶಕ್ತಿಕವಿ ರನ್ನ ಸಾಹಸಭೀಮವಿಜಯವನ್ನು, ದೇಸೀ ಕವಿ ಕುಮಾರವ್ಯಾಸ ಕರ್ಣಾಟಕ ಭಾರತ ಕಥಾ ಮಂಜರಿಯನ್ನು ರಚಿಸಿ ತಮ್ಮ ಕೀರ್ತಿ ಮೆರೆದಂತೆ, ಆಧುನಿಕ ಕವಿಗಳಾದ ಕುವೆಂಪು, ಬಿ.ಎಂ.ಶ್ರೀ, ಸಿದ್ದಲಿಂಗಯ್ಯ ಇನ್ನೂ ಮುಂತಾದ ಸಾಹಿತಿಗಳು, ಕವಿಗಳು, ನಾಟಕಕಾರರು, ಬರಹಗಾರರು ವ್ಯಾಸಭಾರತವನ್ನು ಬಿಟ್ಟೂ ಬಿಡದಂತೆ ಅನುಸರಿಸುತ್ತಲೇ ಬಂದಿದ್ದಾರೆ. ಬುದ್ಧಭಾರತ ಕಾವ್ಯದ ಕತೆಯೂ ಕೂಡ ವ್ಯಾಸನಿಗೆ, ಪಂಪ, ಕುಮಾರವ್ಯಾಸರಿಗೆ ಋಣಿಯಾಗಿ,ರನ್ನನಿಗೆ ತುಸು ಹೆಚ್ಚೇ ತಲೆಬಾಗಿ ಕೃತಿರಚನೆಗೆ ಕೈ ಹಚ್ಚಿರುವೆನೆಂದಿರುವುದು ಕವಿಯ ವಿನಮ್ರತೆಗೆ ಸಾಕ್ಷಿಯಾಗಿದೆ. ರನ್ನನ ಗದಾಯುದ್ಧ ಕೃತಿಯೇ ನನ್ನ ಕಾವ್ಯ ರಚನೆಗೆ ಪೂರಕ, ಪ್ರೇರಕ, ಸ್ಫೂರ್ತಿದಾಯಕ ಶಕ್ತಿಯೆಂದು ಮನಸಾರೆ ಒಪ್ಪಿ, ಕಾವ್ಯ ಕಟ್ಟಲು ಹೊರಟಿರುವುದು ಕವಿಯ ಕ್ರಿಯಾಶೀಲ ಗುಣಕ್ಕೆ ಹಿಡಿದ ಕನ್ನಡಿಯಂತಿದೆ.ರನ್ನ ಕವಿಯ ಗದಾಯುದ್ಧವನ್ನು ಅಭ್ಯಾಸ ಮಾಡುವಾಗಲೆಲ್ಲ ತಾನೇಕೆ ಇಂತಹದೊಂದು ಕಾವ್ಯ ರಚನೆಗೆ ಕೈಹಚ್ಚ ಬಾರದೆನ್ನುವ ತನ್ನೊಳಮನದ ರಿಂಗಣಕ್ಕೆ ಸೋತು ಕಾವ್ಯ ರಚನೆಗೆ ತೊಡಗಿಸಿಕೊಂಡಿದ್ದೇನೆ ಎಂದಿದ್ದಾರೆ. ತನ್ನ ಕಾವ್ಯ ರಚನೆಗೆ ಆರಿಸಿಕೊಂಡ ಕಥಾವಸ್ತು ಮಹಾಭಾರತ ಕಾವ್ಯದಲ್ಲಿನ ಯುದ್ಧದ ಸನ್ನಿವೇಶವೇ ಆಗಿದೆ, ಅದರಲ್ಲಿಯೂ ಕೊನೆಯ ಹದಿನೆಂಟನೆಯ ದಿನದ ಕಥಾವಸ್ತುವನ್ನೇ ಕೇಂದ್ರವಾಗಿ ಇರಿಸಿಕೊಂಡಿರುವುದು ವಿಶೇಷವೆನಿಸುತ್ತದೆ.ಇಲ್ಲಿ ರನ್ನನ್ನು ಅನುಸರಿಸಿದ್ದಾರೆಯೇ ಹೊರತು ಎಲ್ಲಿಯೂ ಅನುಕರಿಸಿಲ್ಲ. ಜಗತ್ಪ್ರಸಿದ್ಧ ಕಾವ್ಯವೊಂದನ್ನು ತನ್ನ ಕಾಲಘಟ್ಟಕ್ಕೆ ತಕ್ಕಂತೆ ಬದಲಾವಣೆ ಮಾಡಿಕೊಂಡು ಕಾವ್ಯ ರಚನೆಗೆ ಕೈ ಹಚ್ಚುವುದು ಅಷ್ಟು ಸುಲಭದ ಮಾತಲ್ಲ. ರನ್ನ ಕವಿಯು ತನ್ನ ಗದಾಯುದ್ಧ ಕಾವ್ಯದಲ್ಲಿ ಮರುಳ್ಗಳ ಪ್ರಸಂಗವನ್ನು ಸೃಷ್ಟಿಸಿ, ತನ್ನ ಶ್ರೇಷ್ಠತೆಯನ್ನ ಮೆರೆದಂತೆ, ಇಲ್ಲಿಯೂ ಕವಿಯು ಒಂದಿಷ್ಟು ಸನ್ನಿವೇಶ ಮತ್ತು ಸಂದರ್ಭಗಳನ್ನು ಬಹು ಜತನ, ಜೋಪಾನ, ಜಾಣ್ಮೆಯಿಂದ ಸೃಷ್ಟಿಸಿ ಮೂಲಕಾವ್ಯಕ್ಕೆ ಎಲ್ಲಿಯೂ ಅಡಚಣೆಯಾಗದಂತೆ ಹೆಣೆಯುತ್ತ ಸಾಗುತ್ತಾರೆ. ಅದೂ ಮಹಾಭಾರತವೆನ್ನುವ ಕಾವ್ಯವನ್ನು ಇಂದಿನ ತನ್ನ ಆಲೋಚನಾ ಕ್ರಮಕ್ಕೆ ಒಪ್ಪುವಂತೆ ಬದಲಾವಣೆ ಮಾಡಲು ಹೊರಡುವುದೆಂದರೆ ಹಾವಿನ ಹುತ್ತಕ್ಕೆ ಕೈ ಹಾಕಿದಂತೆಯೇ ಸರಿ.

ಕೈ ಹಾಕುವಾಗ ಗರುಡ ಮಂತ್ರವು ಸಿದ್ದಿಸಿದ್ದರಷ್ಟೇ ಹಾವನ್ನು ಹೊರಗೆಳೆದು ಸೈ ಎನಿಸಿಕೊಳ್ಳಲು ಸಾಧ್ಯ, ಅಂತಹ ಸಿದ್ದಿಕಲೆಯನ್ನು ತಮ್ಮ ಹೊಸ ಯೋಚನೆ, ಯೋಜನೆ, ಅದು ಬಯಸುವ ಅಭ್ಯಾಸ, ಸಿದ್ದತೆಗಳ ಪೂರ್ವತಯಾರಿಯನ್ನು ಬಲು ಜೋರಾಗಿಯೇ ಮಾಡಿಕೊಂಡಿದ್ದಾರೆಂದು ಕಾವ್ಯವನ್ನು ಅಭ್ಯಾಸಿಸಿದವರಿಗೆ ತಿಳಿಯುತ್ತದೆ. ಮಹಾಭಾರತದ ಕತೆಯನ್ನು ಆಯಾ ಕಾಲಘಟ್ಟಕ್ಕೆ, ಸನ್ನಿವೇಶಕ್ಕೆ, ಸಂದರ್ಭಗಳಿಗೆ ತಕ್ಕಂತೆ ಬರಹಗಾರರು ನಿರಂತರವಾಗಿ ಬದಲಾವಣೆ ಮಾಡಿಕೊಳ್ಳುತ್ತಲೇ ಬಂದಿದ್ದಾರೆ, ಇದಕ್ಕೆ ಬುದ್ದಭಾರತ ಕಾವ್ಯವು ಹೊಸ ಸೇರ್ಪಡೆಯಾಗಿದೆ. ಸ್ವಾತಂತ್ರ್ಯ ಬಂದು ಎಪ್ಪತ್ತೈದಕ್ಕೂ ಹೆಚ್ಚು ವರುಷಗಳು ಉರುಳಿ ಹೋದರೂ ಇಂದಿಗೂ ಉಳ್ಳವರ, ಅಧಿಕಾರಶಾಹಿಗಳ ಪಟ್ಟಭದ್ರ ಹಿತಾಸಕ್ತಿಗಳಿಂದ ನಾವು ತಪ್ಪಿಸಿಕೊಳ್ಳಲು ಸಾಧ್ಯವೇ ಆಗಿಲ್ಲ, ಇಲ್ಲಿರುವ ಪ್ರಜಾಪ್ರಭುತ್ವವೆನ್ನುವುದು ಬರೀ ಹೆಸರಿಗಷ್ಟೇ. ಸಮಾನತೆ, ಸಹಬಾಳ್ವೆ, ಸಹಾಯ, ಸಹಕಾರ, ಸ್ನೇಹ ಇವೆಲ್ಲವೂ ಇಲ್ಲಿ ಇದ್ದೂ ಇಲ್ಲದಂತಾಗಿವೆ. ಬಡವನನ್ನು ಇನ್ನಷ್ಟು ಬಡವನನ್ನಾಗಿಸಿ, ಧನಿಕನನ್ನು ಮತ್ತಷ್ಟು ಧನಿಕನನ್ನಾಗಿಸುತ್ತಲೇ ಹೊರಟ ಈ ವ್ಯವಸ್ಥೆಯಲ್ಲಿ ಸಮಾನತೆ ಹೂವು ಮತ್ತೆ ಅರಳಬೇಕೆಂದರೆ ಅದು ಬುದ್ಧನ ಶಾಂತಿಪಥದ ಮಾರ್ಗದ ಮೂಲಕವೇ ನಾವು ಸಾಗಿದಾಗ ಮಾತ್ರ ಸಾಧ್ಯವೆಂದು ಕಾವ್ಯದುದ್ದಕ್ಕೂ ಪ್ರತಿಪಾದಿಸುವುದು ಇಲ್ಲಿನ ವಿಶೇಷತೆಗಳಲ್ಲಿ ಒಂದಾಗಿದೆ.

ಇಲ್ಲಿ ಬರುವ ಯಾವ ಸನ್ನಿವೇಶವು ಕೂಡ ಕೃತಕ, ನಾಟಕೀಯ, ಪೂರ್ವಗ್ರಹ ಪೀಡಿತವೆನಿಸದೆ ಓದುಗನನ್ನು ಪ್ರತಿ ಹಂತದಲ್ಲಿಯೂ ಚಿಂತನೆಯ ಒರೆಗೆ ಹಚ್ಚುತ್ತಲೇ ಸಾಗುತ್ತವೆ. ತಂತ್ರಜ್ಞಾನದಿಂದ ಕೂಡಿದ ಆಧುನಿಕ ದೃಷ್ಟಿಕೋನದ ಈ ಜಗತ್ತಿನಲ್ಲಿ ಎಲ್ಲವೂ ಇದ್ದೂ ಏನೂ ಇಲ್ಲದ ಆತಂಕ ತುಂಬಿದ ತಲ್ಲಣದ ಬದುಕನ್ನು ಬದುಕಲು ಹೊರಟಿರುವ ನಾವುಗಳು, ಇಲ್ಲಿಂದ ಎಲ್ಲವನ್ನು ಪಡೆದುಕೊಳ್ಳುವ ಭರದಲ್ಲಿ ಮಾನವೀಯತೆ, ಮನುಷ್ಯತ್ವಗಳನ್ನೇ ಕಳೆದುಕೊಂಡು ಬದುಕುತ್ತಿದ್ದೇವೆ ಎನ್ನುವ ಸತ್ಯವನ್ನು ಪ್ರತಿ ಹಂತದಲ್ಲಿಯೂ ಕಾವ್ಯವು ಧ್ವನಿಸುತ್ತಲೇ ಸಾಗುತ್ತದೆ.

ಮಹಾಭಾರತದ ಹದಿನೇಳು ದಿನಗಳ ಯುದ್ಧವು ಮುಕ್ತಾಯಗೊಂಡಿದ್ದು,ಇಲ್ಲಿನ ತನಕದ ಯುದ್ಧದಲ್ಲಿ ಕೌರವ ಪಾಳಯದಲ್ಲಿ ದುರ್ಯೋಧನನ್ನು ಹೊರತುಪಡಿಸಿ ಮಿಕ್ಕೆಲ್ಲರೂ ರಣರಂಗಣದಲ್ಲಿ ಹೆಣವಾಗಿ ಮಲಗಿದ್ದಾರೆ. ಹದಿನೆಂಟನೆಯ ದಿನದ ಯುದ್ಧವಷ್ಟೇ ಈಗ ಬಾಕಿ ಉಳಿದಿರುವುದು, ಅಜನ್ಮವೈರಿಗಳಾದ ಭೀಮ ದುರ್ಯೋಧನರ ಮಧ್ಯೆಯೇ ಅದು ಘಟಿಸಬೇಕು. ಹಾಗೇ ಯುದ್ಧವು ಘಟಿಸಬೇಕೆಂದರೆ ಮುಂಜಾನೆಯಿಂದಲೇ ಭೀಮನ ಕಣ್ಣಿಂದ ಕಣ್ಮರೆಯಾಗಿರುವ ದುರ್ಯೋಧನನು ಭೀಮನೆದುರಿಗೆ ಬಂದು ನಿಂತರಷ್ಟೇ ಸಾಧ್ಯ. ಇಂದಿನ ಈ ಸುವರ್ಣ ಸಂದರ್ಭವನ್ನು ಕೈಬಿಟ್ಟು ಕುಂತರೆ ಮುಂದೆಂದೂ ಇಂತಹ ಅವಕಾಶ ತನ್ನ ಪಾಲಿಗೆ ಬಾರದೆಂದು ಭೀಮನಿಗೂ ಗೊತ್ತು, ಅದಕ್ಕಾಗಿಯೇ ಕಣ್ಮರೆಯಾಗಿರುವ ಕೌರವನನ್ನು ಹುಡುಕಲು ಆಳುಗಳನ್ನು ಅಟ್ಟಿದ ರನ್ನನ ಗದಾಯುದ್ಧ ಪ್ರಸಂಗದಂತೆಯೇ ಇಲ್ಲಿಯೂ ಕತೆ ಪ್ರಾರಂಭಗೊಳ್ಳುತ್ತದೆ.

ಪಂಪಭಾರತ, ಗದಾಯುದ್ಧ, ಕುಮಾರವ್ಯಾಸ ಭಾರತದಲ್ಲಿ ಮಹಾಭಾರತ ಹದಿನೆಂಟನೆಯ ದಿನದ ಯುದ್ಧಕ್ಕೂ ಮೊದಲು ಕೌರವನು ತನ್ನ ತಂದೆ ತಾಯಿಯರನ್ನ ಭೇಟಿ ಮಾಡಿ, ಅವರ ಸಲಹೆಯಂತೆ ತಾತನಾದ ಭೀಷ್ಮರನ್ನು ಭೇಟಿಯಾಗುತ್ತಾನೆ. ಅಲ್ಲಿ ಭೀಷ್ಮರು ಸಂಧಿಯ ಮಾತುಕತೆಯನ್ನ ಆಡಿದರೂ ಕೂಡ ಅದನ್ನು ಒಪ್ಪದೆ ನಿರಾಕರಿಸುವ ಸುಯೋಧನ, ಕೊನೆಗೆ ಅವರ ಪ್ರೀತಿ ತುಂಬಿದ ಒತ್ತಾಯಕ್ಕೆ ಕಟ್ಟು ಬಿದ್ದು ಈವೊಂದು ದಿನವನ್ನು ವೈಶಂಪಾಯನ ಸರೋವರದಲ್ಲಿ ಜಲಸ್ಥಂಭನ ಮಂತ್ರ ಜಪಿಸುತ್ತ ಕಳೆಯಲು ಒಪ್ಪಿ, ಅವರ ಆಶೀರ್ವಾದ ಪಡೆದು ಅತ್ತ ನಡೆಯುತ್ತಾನೆ. ಸರೋವರವನ್ನು ತಲುಪಿದ ಉರಗಪತಾಕನು ಸರೋವರದೊಳಕ್ಕೆ ಹಿಮ್ಮುಖ ಚಾಲನೆಯ ಮೂಲಕ ತಲುಪುತ್ತಾನೆ.

ಆದರೆ ಈ ಕಾವ್ಯದಲ್ಲಿ ದುರ್ಯೋಧನನು ತನ್ನ ತಂದೆ, ತಾಯಿಯರನ್ನ ಭೇಟಿಯಾದ ಉಲ್ಲೇಖವೆಲ್ಲಿಯೂ ಬರುವುದಿಲ್ಲ. ತಾತ ಭೀಷ್ಮರನ್ನ ಭೇಟಿಯಾಗಿ, ಧರ್ಮಜನೊಡನೆ ಸಂಧಿಗೆ ಒಪ್ಪದೆ, ಅವರ ಸಲಹೆಯ ಮೇರೆಗೆ ಗುರು ಬಲರಾಮರು ಬರುವವರೆಗೆ ಕಾಲವಂಚನೆ ಮಾಡಲು ವೈಶಂಪಾಯನ ಸರೋವರದತ್ತ ಮುಖ ಮಾಡಿ ಬರುವ ಸನ್ನಿವೇಶವು ಇಲ್ಲಿ ಸುಳಿಗಾಳಿಯಂತೆ ಸೂಚ್ಯವಾಗಿ ಬಂದು ಹೋಗುತ್ತದೆ. ಪಂಪ, ರನ್ನ, ಕುಮಾರವ್ಯಾಸರ ಕಾವ್ಯಗಳಂತೆ ಭೀಮನು ಹದಿನೆಂಟನೆಯ ದಿನದ ಸೂರ್ಯೋದಯವಾದೊಡನೆ ತನ್ನ ಕಡುವೈರಿಯಾದ ಕೌರವನನ್ನು ಎಲ್ಲಿಯೂ ಕಾಣದೆ, ಆತನಿಗಾಗಿ ಹುಡುಕಿ ತಡಕುತ್ತಾನೆ.

"ಮರೆಮಾಚಿಕೊಂಡನೋ ನಾರಿ ಸೆರಗಲಿ
ಷಂಡನು ಶಯ್ಯಾಗೃಹದೊಳೆ? ಅರಮನೆಯಲ್ಲಿಲ್ಲ !
ಆನೆಯಡಗೊಳಗವಿತು ಕುಳಿತನೋ
ಮಣ್ಣೊಳಗೆ ಮಣ್ಣಾಗಿಹನೋ ಜೀವಭಯದಿ "
ಎಂದು

ಎಲ್ಲಿಯೂ ಅವನ ಮೊಗ ಕಾಣದೆ ಕೋಪಗೊಂಡು, ಅವನ ಇರುವಿಕೆಯ ಸುದ್ದಿಯನ್ನು ಹುಡುಕಿ ತರುವಂತೆ ತನ್ನ ಪ್ರಿಯಶಿಷ್ಯನಾದ ವಿಂಧ್ಯಕನನ್ನು ಅಟ್ಟುತ್ತಾನೆ. ಇಲ್ಲಿ ಪ್ರಿಯಶಿಷ್ಯ ಎನ್ನುವ ಮಾತು

ಪಂಪ, ರನ್ನ, ಕುಮಾರವ್ಯಾಸರ ಕಾವ್ಯಗಳಲ್ಲಿ ಬರದೆ ಕಾವ್ಯದುದ್ದಕ್ಕೂ ಆಳು, ಸೇವಕ ಎನ್ನುವ ಮಾತುಗಳೇ ಬರುತ್ತವೆ. ಆದರಿಲ್ಲಿ ತನ್ನ ಆಳನ್ನು ಪ್ರಿಯಶಿಷ್ಯ ಎಂದು ಭೀಮ ಬಳಸುವುದು ಅವನೊಳಗಿನ ಮಾನವೀಯತೆಗೆ ಮತ್ತು ವ್ಯಕ್ತಿ ಗೌರವಕ್ಕೆ ಹಿಡಿದ ಕನ್ನಡಿಯಂತೆ ಕಂಡು ಬರುತ್ತದೆ.

ಗದಾಯುದ್ಧ ಕಾವ್ಯದಲ್ಲಿ ವಿಂಧ್ಯಕನು ಉರಿ ಬಿಸಿಲಿನಲಿ ಸುತ್ತಾಡಿದರು ಎಲ್ಲಿಯೂ ಸುಯೋಧನನ ಸುಳಿವು ದೊರಯದೆ, ಬಾಯರಿ ಬಳಲಿ ಬೆಂಡಾಗಿ ದಾವರ ಇಂಗಿಸಿಕೊಳ್ಳಲು ವೈಶಂಪಾಯನ ಸರೋವರದ ಬಳಿ ಬರವ ಸನ್ನಿವೇಶವಿದೆ. ಅಲ್ಲಿ ಅವನ ಕಣ್ಣಿಗೆ ಸರೋವರದಿಂದ ವ್ಯಕ್ತಿಯೊಬ್ಬನು ಹೊರಬಂದಿರುವ ಹೆಜ್ಜೆಯ ಗುರುತುಗಳು ಮರಳಿನ ಮೇಲೆ ಮೂಡಿ ನಿಂತಿರುವುದು ಕಾಣ ಸಿಗುತ್ತವೆ, ಆ ಹೆಜ್ಜೆಯ ಗುರುತುಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅನುಮಾನವೊಂದು ಕಾಡತೊಡಗುತ್ತದೆ. ಸರೋವರದಿಂದ ವ್ಯಕ್ತಿಯೊಬ್ಬನು ಹೊರಬರುವುದಕ್ಕಿಂತ ಮೊದಲು ಆತ ಸರೋವರದೊಳಕ್ಕೆ ಹೋಗಿರಲೇಬೇಕು, ಇಲ್ಲಿ ಹೊರಬಂದು ಹೆಜ್ಜೆ ಗುರುತುಗಳಷ್ಟೇ ಇವೆ, ಆದರೆ ಒಳಹೋದ ಹೆಜ್ಜೆಯ ಗುರುತುಗಳೆಲ್ಲಿ ಎನ್ನುವ ಸಂಶಯದ ಸಂಶೋಧನಾ ಬುದ್ಧಿಯು ಅವನೊಳಗೆ ಕೆಲಸ ಮಾಡಲು ಆರಂಭಗೊಳ್ಳುತ್ತದೆ. ಕೂಡಲೇ ಈ ವಿಚಾರವನ್ನು ತನ್ನೊಡೆಯನಿಗೆ ತಿಳಿಸಬೇಕೆಂದು ಅತ್ತ ಹೊರಡುವ ವಿಚಾರ ಮೂಲ ಕಾವ್ಯಗಳಲ್ಲಿ ಕಾಣಸಿಗುತ್ತದೆ.

ಆದರಿಲ್ಲಿ ದುರ್ಯೋಧನನಿಗಾಗಿ ಹುಡುಕಿ ತಡಕಿದ ವಿಂಧ್ಯಕನು ರಣರಂಗದಲ್ಲಿ ನಡೆದು ಬರುತ್ತ ಭಾರತದ ಈ ಘನಘೋರ ಯುದ್ಧವು ನಡೆದದ್ದು ಯಾರಿಗಾಗಿ ಮತ್ತು ಏತಕ್ಕಾಗಿ, ಇಲ್ಲಿ ಬಿದ್ದಿರುವ ರಾಶಿ ರಾಶಿ ಹೆಣಗಳು ಯಾರ ಸ್ವಾರ್ಥಕ್ಕಾಗಿ ಸಲುವಾಗಿ ಬಲಿಯಾದವು ಎನ್ನುವ ಪ್ರಶ್ನೆಯೊಂದು ಹುಟ್ಟಿಕೊಳ್ಳಿತ್ತದೆ. ಬಡವರಿಗೆ ಉಣಲುಡಲು, ನೆತ್ತಿಕಾಯಲೊಂದು ಸೂರಿಗಾಗಿ ಇತಿಹಾಸದುದ್ದಕ್ಕೂ ಯಾವ ಅರಸನು ಹೋರಾಡಲಿಲ್ಲ,ಅವರ ಕಾದಾಡಿದ್ದೆಲ್ಲವೂ ರಾಜ್ಯ, ದೇಶಗಳಿಗಾಗಿ, ಅಧಿಕಾರದ ಪ್ರತಿಷ್ಠೆಗಳಿಗಾಗಿಯಷ್ಟೇ.ತಮ್ಮ ಸ್ವಾರ್ಥಕ್ಕೆ ಮುಗ್ದರ, ಬಡವರ, ದೀನ ದಲಿತರ ಬಲಿ ಪಡೆದದ್ದು ಬಿಟ್ಟರೆ ಮತ್ತಿನ್ನೇನಕ್ಕೂಅಲ್ಲ, ಸತ್ತವನು ಸತ್ತ, ಬದುಕಿದವರು ತಮ್ಮ ಬದುಕನ್ನು ನೋಡಿಕೊಳ್ಳುತ್ತಾರೆಯೇ ಹೊರತು ತಮಗಾಗಿ ಪ್ರಾಣ ಕೊಟ್ಟವನ್ನು ಇಲ್ಲಿ ಯಾರು ನೆನೆಯರು ಎಂದು ಯೋಚಿಸುತ್ತ ಹೆಣಗಳನ್ನು ದಾಟಿಕೊಂಡೇ ದುರ್ಯೋಧನನ್ನು ಹುಡುಕುತ್ತಿದ್ದಾನೆ.ದೂರದಲ್ಲಿ ಸೊಕ್ಕಿದ ಆನೆಯೊಂದು ನಡೆದು ಬರುವಂತೆ ಸುಯೋಧನನು
ಇತ್ತಲೇ ಬರುತ್ತಿರುವುದು ಕಾಣಿಸುತ್ತದೆ, ಕೂಡಲೇ ಸತ್ತು ಬಿದ್ದಿರುವ ಆನೆಯ ಮಾಂಸದ ರಾಶಿಯೊಳಕ್ಕೆ ವಿಂಧ್ಯಕನು ಅವಿತು ಕುಳಿತುಕೊಳ್ಳುತ್ತಾನೆ. ತನ್ನ ಮುಂದೆಯೇ ದುರ್ಯೋಧನನು ವೈಶಂಪಾಯನ ಸರೋವರದತ್ತ ಹೋದ ವಿಷಯವನ್ನು ತನ್ನೊಡೆಯನಿಗೆ ಅರುಹಲು ಅತ್ತ ಹೆಜ್ಜೆ ಬೆಳೆಸುತ್ತಾನೆ.

ಪಂಪ, ರನ್ನರ ಕಾವ್ಯಗಳಲ್ಲಿ ಭೀಮನು ದುರ್ಯೋಧನನ್ನು ಹುಡುಕಿ ಬರುವಂತೆ ಕಳುಹಿಸಿದ ಸೇವಕರಲ್ಲಿ ಒಬ್ಬನಾದ ವಿಂಧ್ಯಕನು ವೈಶಂಪಾಯನ ಸರೋವರದ ಮರಳಿನ ಮೇಲೆ ತಾನು ಕಂಡ ಹೆಜ್ಜೆ ಗುರುತುಗಳ ವಿವರಣೆಯನ್ನು ತನ್ನೊಡೆಯ ಭೀಮನಿಗೆ ನೀಡುತ್ತಾನೆ, ಈ ಮಾಹಿತಿಯನ್ನು ಅಲ್ಲಿಯೇ ಇದ್ದ ಕೃಷ್ಣ,ಪಾಂಡವರು ಕೇಳಿಸಿಕೊಂಡು ಸರೋವರದ ಬಳಿ ಬಂದು ಉಸುಕಿನ ಮೇಲೆ ಮೂಡಿದ್ದ ಹೆಜ್ಜೆಯ ಗುರುತುಗಳನ್ನು ಪರೀಕ್ಷೆ ಮಾಡಲು ತೊಡಗುತ್ತಾರೆ. ಆ ಹೆಜ್ಜೆಗಳ ಮೇಲಿದ್ದ ಕೆಲವು ಗುರುತುಗಳನ್ನು ಗಮನಿಸಿದ ಕೃಷ್ಣ ಮತ್ತು ಧರ್ಮರಾಯರು ಇವು ಕೌರವನ ಹೆಜ್ಜೆ ಗುರುತುಗಳೆಂಬ ಸ್ಪಷ್ಟ ತೀರ್ಮಾನಕ್ಕೆ ಬಂದು, ದುರ್ಯೋಧನನು ಈ ಸರೋವರದ ನೀರಿನಲ್ಲಿಯೇ ಅಡಗಿ ಕುಳಿತಿರುವನೆಂಬ ಒಮ್ಮತದ ಅಭಿಪ್ರಾಯಕ್ಕೆ ಬರುತ್ತಾರೆ.

ಬುದ್ಧಭಾರತ ಕಾವ್ಯದಲ್ಲಿ ದುರ್ಯೋಧನನ್ನು ಹುಡುಕಿ ಹೊರಟ ವಿಂಧ್ಯಕನು ಹಿಂದಿರುಗಿ ಬರುವುದಕ್ಕೂ ಮೊದಲೇ ಕೋಪಗೊಂಡು ಚಡಪಡಿಸುತ್ತಿದ್ದ ಭೀಮನು, ತನ್ನ ಸಹೋದರರ ಮೇಲೆ ಅಸಮಾಧಾನಗೊಂಡು ತಾನೇ ತನ್ನ ಕಡುವೈರಿ ದುರ್ಯೋಧನನ್ನು ಹುಡುಕಲು ರಣರಂಗಕ್ಕೆ ಕಾಲಿರಿಸುತ್ತಾನೆ. ಹೀಗೆ ಹೆಣಗಳನ್ನು ದಾಟಿಕೊಂಡು ಮುಂದೆ ನಡೆದು ಬರುತ್ತಿದ್ದ ಭೀಮನಿಗೆ ಅಲ್ಲಿದ್ದ ಕೊಳೆತ ಹೆಣಗಳ ರಾಶಿ, ಕೈಕಾಲುಗಳನ್ನು ಕಳೆದುಕೊಂಡು ಗೋಳಿಡುತ್ತಿದ್ದ ಭಟರು, ತನ್ನ ಮಗ, ಗಂಡ, ಅಪ್ಪನಿಗಾಗಿ ಹುಡುಕಿ ಬಂದು, ಅವರ ಶವಗಳ ಮುಂದೆ ಕುಳಿತು ಕಣ್ಣೀರಿಡುತ್ತಿದ್ದ ಪೋಷಕರನ್ನ , ಪತ್ನಿಯರನ್ನ, ಮಕ್ಕಳನ್ನ ಕಂಡ ಭೀಮನು ತಮ್ಮ ಈ ಕೊಲ್ಲುವ ಕೆಲಸಕ್ಕೆ ತಾನೇ ಹೇಸಿ, ಜುಗುಪ್ಸೆಗೊಳ್ಳುತ್ತಾನೆ.

ರಣರಂಗದಲಿ ಮುಂದೆ ಸಾಗುತ್ತಿದ್ದವನ ಕಿವಿಯ ಮೇಲೆ ಹಸುಳೆಯ ಅಳುವೊಂದು ಬಿದ್ದೊಡನೆ ತಟ್ಟನೆ ನಿಂತ ಭೀಮನ ಕಣ್ಣಿಗೆ ಸತ್ತೊಂದು ಆನೆಯೊಂದಕ್ಕೆ ಒರಗಿ ಪ್ರಾಣ ಬಿಟ್ಟ ಭಟನೊಬ್ಬ ಕಾಣಿಸುತ್ತಾನೆ. ಆತನ ಹೆಂಡತಿ ಅವನನು ಕಾಣಲು ಬಂದು, ಅವನ ಮರಣವನು ಕಂಡು ದಿಗ್ಭ್ರಾಂತಗೊಂಡು ಅಲ್ಲೇ ಮಗುವನ್ನು ಹಡೆದಿದ್ದಳು. ಶತ್ರುವಿನ ಖಡ್ಗದ ಬಲವಾದ ಹೊಡೆತಕ್ಕೆ ಹಾರಿ ಹೋಗುತ್ತಿದ್ದ ಜೀವವನ್ನು ಮುಷ್ಠಿಯಲಿ ಬಂಧಿಸಿ ತನ್ನನ್ನು ಕಾಣಲು ಬರುವ ಮಡದಿಗಾಗಿ ಉಳಿಸಿಕೊಳ್ಳಲು ಮುಷ್ಠಿಗಟ್ಟಿದ್ದ ಆ ಭರವಸೆಯ ಬಿಗಿಹಿಡಿತವಿನ್ನೂ ಸಡಿಲಗೊಂಡಿರಲಿಲ್ಲ. ಮದುವೆಯಾಗಿ ಇನ್ನೂ ವರುಷವೂ ತುಂಬಿಲ್ಲ, ಆಗಲೇ ಮಡದಿ, ಮಗುವನ್ನು

ಅನಾಥರನ್ನಾಗಿ ಮಾಡಿ ಹೋಗುತ್ತಿರುವ ಅಘಾದವಾದ ನೋವು ಅವನ ಕಣ್ಣುಗಳಲ್ಲಿ ತುಂಬಿದ್ದನ್ನು ಕಂಡ ಭೀಮನ ಕರುಳು ಯಮಯಾತನೆ ಪಡುತ್ತದೆ.ಅಳುತ್ತಿದ್ದ ಮಗುವನ್ನು ಎತ್ತಿಕೊಂಡ ಮಿಡುಕುಳ್ಳ ಭೀಮನಿಗೆ ಆ ಮಗುವು ಹೊಡೆಯಿತು, ನನ್ನಪ್ಪನನು ಕೊಲಿಸಿದ ಕಾಡುಪಾಪಿ ನೀನು, ನನ್ನನ್ನು ಕೆಳಗಿಳಿಸು ಎಂಬಂತೆ ಅದರ ಅಳು ಕಂಡಿತವನಿಗೆ. ಕೊರಳ ಹಾರವನು ಆ ಮಗುವಿನ ತಾಯಿಗೆ ಕೊಟ್ಟು, ಕಣ್ಣುಗಳಲ್ಲೇ ಭರವಸೆಯನ್ನಿತ್ತು ಅಲ್ಲಿಂದ ಮುಂದೆ ಹೊರಟನು.

ವೃದ್ಧ ದಂಪತಿಗಳಿಬ್ಬರು ಹೋರಾಡಿ ಮಡಿದ ಮಗನ ಮುಂದೆ ಕಣ್ಣೀರುಗರೆಯುತ್ತಿರುವುದ ಕಂಡ ವೃಕೋಧರನಿಗೆ ತನ್ನ ಮಗ ಘಟೋತ್ಕಚನ ಸಾವು ಕಣ್ಮುಂದೆ ಬಂದು ನಿಲ್ಲುತ್ತದೆ, ಕೊನೆಯದಾಗಿ ಮಗನ ಬಾಯಿಗೆ ನೀರು ಬಿಡುವಾಗ ತನ್ನ ಕೈ ನಡುಗಿದ್ದು ಈಗಲೂ ಹಸಿಹಸಿಯಾಗಿದೆ.

"ಇಲ್ಲಿ ಕರುಳ ಕುಡಿಗೆ ಬೆಂಕಿ ಇಡುವ ದೌರ್ಭಾಗ್ಯವ ನೆನೆದು ಒಂದೇ ಸಲ ಅಪ್ಪಳಿಸಬೇಕೆನ್ನಿಸಿರಲಿಲ್ಲವೆ ಭೂಮಂಡಲವನ್ನೇ "

ಇಲ್ಲಿ ನಾವು ಪಂಪ, ರನ್ನರ ಕಾವ್ಯದಲ್ಲಿ ದುರ್ಯೋಧನನು ತನ್ನ ಮಗ ಲಕ್ಷಣಕುಮಾರನ ಕಳೆಬರವನ್ನು ಕಂಡು"ಜನಕಂಗೆ ಜಲಾಂಜಲಿಯಂ ತನೂಭವ ಕುಡುವುದುಚಿತಂ" ತಂದೆಯಾದ ನಾನು ನಿನಗೆ ಕೊಡುವಂತೆ ಆದುದು ಎಷ್ಟು ಸರಿ ಮಗನೇ, ನೀನು ಹಿಂದಿನಿಂದ ನಡೆದು ಬಂದ ಕ್ರಮವನ್ನು ಮುರಿಗೆ ಎಂದು ನೊಂದು ಮರುಗಿದ ದೃಶ್ಯವಿಲ್ಲಿ ಓದುಗರ ಕಣ್ಮುಂದೆ ಬಂದು ನಿಂತು ಬಿಡುತ್ತದೆ.

ಭಟನ ಸಾವು, ಮಗುವಿನ ಅಳು, ಮಡದಿಯ ಯಾತನೆ, ವೃದ್ಧ ದಂಪತಿಗಳ ಅನಾಥ ಪ್ರಜ್ಞೆ ಇವೆಲ್ಲವೂ ಭೀಮನೊಳಗೆ ಇನ್ನಿಲ್ಲದಂತೆ ಕಂಡು ಕಾಡಲು ತೊಡಗುತ್ತವೆ. ಶತ್ರು ಪಾಳೆಯದ ಸುಪ್ರತೀಕವೆಂಬ ಮದಗಜದ ಆರ್ಭಟಕ್ಕೆ ಇಡೀ ಸೈನ್ಯವು ತತ್ತರಿಸುತ್ತಿರುವಾಗ ಗಾಳಿಯ ದಿಕ್ಕನ್ನೇ ಅನುಸರಿಸಿ ಬಂದು ಮೃತ್ಯುದಂಡದಂತಿದ್ದ ತನ್ನ ಗದಾದಂಡವನ್ನು ಬೀಸಿ ಹೊಡೆದೊಡನೆ ಆಗಸಕ್ಕೆ ಚಿಲ್ಲನೆ ಚಿಮ್ಮಿದ ಅದರ ಆ ನೆತ್ತರು ಇಡೀ ಮುಗಿಲನ್ನೇ ಕೆಂಪಾಗಿಸಿತ್ತು. ಆ ಕೆನ್ನೆತ್ತರೊಳಗೆ ಕಮಲದ ಕೆಂಪಾಗಿ, ಕಮಲದೇಹದ ದಿವ್ಯಪುರುಷನೊಬ್ಬ ಆಗಸದ ತುಂಬ ತನ್ನ ಬಾಹುಗಳ ಚಾಚಿ ನನ್ನನ್ನು ಕರೆದಂತಾಗಿ ಮನಸ್ಸು ಅತ್ತ ಹೊರಳಲು ಚಡಪಡಿಸಿತು. ತನಗೆ ಕಂಡ ಆ ದಿವ್ಯಪುರುಷ, ನಮಗೂ ಕಂಡನೆಂದು ನನ್ನೊಟ್ಟಿಗಿದ್ದ ಯಾರೊಬ್ಬರು ಹೇಳಲಿಲ್ಲ, ನನ್ನೊಬ್ಬನಿಗೆ ಅವನ ದರ್ಶನವಾಗಲು ಕಾರಣವಾದರೂ ಏನೆಂಬ ಯೋಚನೆ ಇನ್ನಿಲ್ಲದಂತೆ ನನ್ನನ್ನಂದು ಬಿಟ್ಟೂ ಬಿಡದೆ ಕಾಡಿತ್ತು. ಹಾಗಿದ್ದರೆ ಆ ಕಮಲಕಾಯದ ದಿವ್ಯಪುರುಷನಾರು ಎನ್ನುವ ಪ್ರಶ್ನೆಗೆ ಉತ್ತರವಿರಲಿಲ್ಲ ನನ್ನ ಬಳಿ. ಈ ಯೋಚನೆಯಲ್ಲಿದ್ದ ಭೀಮನ ಕಣ್ಮುಂದೆ ತಟ್ಟನೆ ಪ್ರಿಯಭಟನ ಮಗು ಅಳು ನಿಲ್ಲಿಸಿ ನಗುವೊಡೆದ ಮೊಗ ಕಣ್ಮುಂದೆ ನಿಂತೊಡನೆ, ಅಂದು ಕಂಡ ಆ ದಿವ್ಯಪುರುಷನ ಮೊಗವೇ ಇದೆಂದು ದಿಗ್ಭ್ರಮೆಗೊಂಡನು.

ಹೀಗೆ ಯೋಚಿಸುತ್ತಲೇ ಮುಂದೆ ಸಾಗುತ್ತಿದ ಭೀಮನಿಗೆ ವಿಂಧ್ಯಕನು ಎದುರಾದನು, ಅವನನ್ನು ಕಂಡೊಡನೆ ತನ್ನೊಳಗಿನ ಆಕ್ರೋಶ, ನೋವು, ದಿವ್ಯಪುರುಷನ ಧ್ಯಾನ ಇವುಗಳನ್ನ ಮುಂದಿಟ್ಟುಕೊಂಡವನು ತನ್ನಷ್ಟೇ ತಾನೇ ಹೀಗೆನ್ನುತ್ತಾನೆ,

"ದ್ವೇಷವೆಂಬುದು ಭಸ್ಮ ಮಾಡದೆ ಬಿಡದ ಉರಿಬೆಂಕಿ ಕಣಾ, ಸಾಕಲ್ಲವೆ ಇಷ್ಟು ಸಾವು ನೋವು ಉಳಿದವರೆಷ್ಟು?

ನಾನು ನೀನು ಇನ್ನಷ್ಟು " ಎಂದು ನುಡಿದು ಕ್ಷಣ ಕಾಲ ಮೌನವಾದನು. ಮತ್ತೆ ಗೆದ್ದೇ ಗೆಲುವೆ ಇಂದಿನ ಯುದ್ಧವ ಮುಂದಣ ಘನಕಾರ್ಯಕ್ಕಾಗಿ ಎಂದು ಮುಂದೆ ಬರುವ ಶುಭಕಾಲವನ್ನು ಕುರಿತು ಶಕುನ ನುಡಿಯುತ್ತಾನೆ. ಹಾಗಿದ್ದರೆ ಇಲ್ಲಿ ಮುಂದೆ ಬರುವ ಘನಕಾರ್ಯವಾದರೂ ಯಾವುದು, ರಾಜಪ್ರಭುತ್ವವಳಿದು ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರವೇ ಬರುವ ಪ್ರಜಾಪ್ರಭುತ್ವವೇ ಎನ್ನುವ ಪ್ರಶ್ನೆಗೆ ಕಾವ್ಯದ ಕೊನೆಯಲ್ಲಿ ಉತ್ತರ ಸಿಗುತ್ತದೆ. ತನಗಾಗಿ ಹೋರಾಡಿ ಮಡಿದ ಪ್ರಿಯ ಭಟನ ಆ ಮಗುವೇ ಮುಂದೆ ಈ ರಾಜ್ಯವನ್ನು ಆಳಬೇಕೆಂದು ಭೀಮನು ತೀರ್ಮಾನಿಸುವುದು ಪ್ರಜಾಪ್ರಭುತ್ವದ ಸಂಕೇತವಾಗಿಲ್ಲಿ ಕಾಣ ಸಿಗುತ್ತದೆ.

"ಬಾ ನನ್ನ ಆಳಲ್ಲ ನೀನು ಆಪ್ತಸಮಾಲೋಚಕ
ಹೊಣೆಗಾರ ಮಾತ್ರವಷ್ಟೆ ನಾನು
ನಮಗಾಗಿ ತೇದುಕೊಳ್ಳುವುದೇಕೆ ನಿಮ್ಮ ನೀವು
ಬಾಳಿರಿ ಉಳಿಯಿರಿ ನಿಮಗಾಗಿ ನೀವು "

ಎನ್ನುವ ವಿಂಧ್ಯಕನನ್ನು ಕುರಿತು ಭೀಮನಾಡಿದ ಆ ಮಾತುಗಳಲ್ಲಿ ಜಗದಲಿ ಇನ್ನು ಆಳು, ಅರಸ,ಬಡವ ಬಲ್ಲಿದ, ಮೇಲು ಕೀಳಿನ ಭಾವ ತೊಲಗಿ, ಸಮಾನತೆ, ಸಹಬಾಳ್ವೆಯ ಹೊಸಜಗವೊಂದು ನಿರ್ಮಾಣಗೊಳ್ಳುವ ಮುನ್ಸೂಚನೆಯನ್ನು ಕೊಡುತ್ತಾನೆ. ಅರಸರ, ಉಳ್ಳವರ ಸುಖಕ್ಕಾಗಿ ತಮ್ಮಿಡೀ ಬಾಳನ್ನೇ ತೇದುಕೊಂಡ ನೀವು, ಇನ್ನಾದರೂ ನಿಮಗಾಗಿ ಬಾಳಿ ಎನ್ನುವ ಮಾತು ಸಾಮಾನ್ಯರ ಬಾಳಲ್ಲಿ ಆಶಾಕಿರಣದ ಬೆಳಕೊಂದನ್ನು ಮೂಡಿಸುತ್ತದೆ. ಇಲ್ಲಿ ನಾವೂ ಮನುಷ್ಯರೇ ಎನ್ನುವ ಪ್ರಶ್ನೆಗೆ ಹೌದು ನಾವು ಮನುಷ್ಯರು ಎನ್ನುವ ಉತ್ತರ ಸಿಕ್ಕಂತಾಗುತ್ತದೆ.

ರನ್ನನ ದುರ್ಯೋಧನನು ರಣರಂಗದಲ್ಲಿ ಚಲ್ಲಾಪಿಲ್ಲಿಯಾಗಿ ಚಲ್ಲಾಡಿದ ಹೆಣಗಳನ್ನು

ಮೆಟ್ಟಿಕೊಂಡು ಸಂಜಯನೊಟ್ಟಿಗೆ ಸಾಗುವಾಗ ತನ್ನ ತಂದೆ, ತಾಯಿಯರ ಭೇಟಿ, ಅವರ ಸಂಧಿಯ ಒಡಂಬಡಿಕೆಗೆ ಒಪ್ಪದ ಕೌರವನಿಗೆ ' ಸತ್ತ ಮಕ್ಕಳು ಸತ್ತು ಹೋದರು, ನೀನಾದರೂ ಉಳಿದರೆ ಆ ತೀರಿಹೋದ ಮಕ್ಕಳನ್ನೆಲ್ಲ ನಿನ್ನಲ್ಲಿ ಕಾಣುವೆನೆಂದ' ತಾಯಿಯ ಮಾತನ್ನು ನಿರಾಕರಿಸಿ ಅಲ್ಲಿಂದ ತಾತ ಭೀಷ್ಮರ ಭೇಟಿಗೆ ಸಂಜಯನೊಟ್ಟಿಗೆ ಹೊರಡುವುದು. ಅಲ್ಲಿ ಗುರು ದ್ರೋಣರ, ತಮ್ಮ ದುಶ್ಯಾಸನನ, ಅಭಿಮನ್ಯುವಿನ, ಮಗ ಲಕ್ಷಣಕುಮಾರನ ಮತ್ತು ಪ್ರಿಯಮಿತ್ರ ಕರ್ಣನ ಕಳೇಬರಗಳನ್ನು ಕಂಡು, ಅವುಗಳ ಮುಂದೆ ನಿಂತು ಮನ ಕರಗುವಂತೆ ರೋಧಿಸುವುದು. ನಂತರ ತಾತನದ ಭೀಷ್ಮರ ಭೇಟಿಯಾಗಿ ಹಿಂದಿರುಗಿ ವೈಶಂಪಾಯನ ಸರೋವರದತ್ತ ನಡೆದು ಬರುತ್ತಿರುವಾಗ ರನ್ನನು ಅದ್ಭುತ ಸೃಷ್ಟಿಯ ಮರುಳ್ಗಳ ಪ್ರಸಂಗ ಬರುತ್ತದೆ.

ಬುದ್ದ ಭಾರತದ ದುರ್ಯೋಧನ ಒಂಟಿ ಒಬ್ಬೊಂಟಿಯಾಗಿ ರಣರಂಗದಲ್ಲಿ ನಡೆದು ಬರುವಾಗ ಆತ್ಮೀಯ ಗೆಳೆಯ, ಪ್ರಿಯ ತಮ್ಮನ ನೆನಪು ಉಕ್ಕಿ ಬಂದು ದುಃಖ ಉಮ್ಮಳಿಸುತ್ತದೆ. ಇದರ ಮಧ್ಯೆ ತನಗೇ ತಿಳಿಯದಂತೆ ತನ್ನ ಸಿಟ್ಟು, ಸೆಡವು, ಕೋಪತಾಪದ ಹಠಮಾರಿತನದಿಂದಾದ ಅನಾಹುತಗಳನ್ನು ಕುರಿತು ನೋವು ಬೇಸರಕೆಯು ಅವನಲ್ಲಿ ಹುಟ್ಟುತ್ತದೆ.ಇಲ್ಲಿ ದುರ್ಯೋಧನನಿಗೆ ತನ್ನ ತಪ್ಪಿನ ಅರಿವು ಆಗಿರುವಂತೆ ಕಂಡು ಬರುತ್ತದೆ. ಕರು ತಾಯಿಯನ್ನು ಅರಸಿ ಬಂದಂತೆ ಭಾನುಮತಿ, ಲಕ್ಷಣಕುಮಾರರ ಘಟನೆಯೊಂದು ನೆನಪಾಗುತ್ತದೆ.

ಒಮ್ಮೆ ನಾನು ಭಾನುಮತಿಯು ಶಯ್ಯಾಗೃಹದಲ್ಲಿ ನಗುತ್ತ, ನುಡಿಯುತ್ತ ಕುಳಿತಿದ್ದಾಗ ಮಗ ಲಕ್ಷಣನು ಮದುವೆಗೂ ಮುನ್ನ ತಾನು ಭಾನುಮತಿಗೆ ಕಾಣಿಕೆಯಾಗಿ ನೀಡಿದ್ದ ಚಲುವಿನ ಮಾಣಿಕ್ಯದ ಅರಮನೆಯೊಟ್ಟಿಗೆ ಆಟವಾಡುತ್ತಾ, ಅದನ್ನು ಆಗಾಗ ಬೀಳಿಸುತ್ತಿರಲು, ಅದ ಕಂಡು ಮಗುವಿನಿಂದ ಕೈಯಿಂದ ಅದನ್ನ ಕಿತ್ತುಕೊಂಡು ಬೇರೆ ರತ್ನದ ಗೊಂಬೆಗಳನು ಕೊಟ್ಟಳು. ಅವನೋ ಆ ಗೊಂಬೆಗಳನ್ನು ಮುಟ್ಟದೆ, ಮಂಚವನ್ನೇರಿ ಮತ್ತದೇ ಮಾಣಿಕ್ಯದ ಅರಮನೆಯನ್ನು ಎತ್ತಿಕೊಳ್ಳಲು ಹೋದಾಗ ಅದು ಕೈಯಿಂದ ಜಾರಿ ಬೀಳುವಾಗ ಅದನ್ನು ಹಿಡಿದುಕೊಳ್ಳಲು ಭಾನುಮತಿ ಎಷ್ಟೇ ಪ್ರಯತ್ನ ಪಟ್ಟರು ಸಿಗದೆ, ನೆಲಕ್ಕೆ ಬಿದ್ದು ಚೂರಾಯಿತು. ಕೋಪಗೊಂಡ ಭಾನುಮತಿ ಮಗುವಿಗೆ ಚಟೀರನೊಂದು ಕೊಡಲು ಮಗು ಕಿಟಾರನೆ ಕಿರುಚಿ ಅಳಲು ತೊಡಗಿದಾಗ " ನನ್ನ ಚಿನ್ನ, ನನ್ನರನ್ನ ಯಾರು ದೊರೆ ಹೊಡೆದೋರು ಹೊಡೆದು ಬಿಡೋಣ ಸುಮ್ಮನಿರಪ್ಪ...." ಎಂದು ಮುದ್ದಿಸುತ್ತ " ಸ್ವಾಮಿ ನನ್ನ ಕಂದನನ್ನೇಕೆ ಹೊಡೆದಿರಿ" ಎಂದು ನನ್ನನ್ನು ಬೆದರಿಸಲು, ಕೂಡಲೇ ಮಗು ಉಮ್ಮಳಿಸಿ ಬರುತ್ತಿದ್ದ ಅಳುವನ್ನು ತಡೆದು 'ನೀನೇ' ಎಂದು ತಾಯಿ ಕಡೆ ನೋಡಿತು.

ಅಯ್ಯೋ ನನ್ನ ಕಂದ ಜಾಣ ತಪ್ಪಾಯಿತು ಎಂದು ಅದರ ಬಾಯನ್ನು ತನ್ನ ಬಾಯಿಗೆ ಒತ್ತಿ " ದೂರಿ ದೂರಿ ದುವ್ವಾಲಮ್ಮ ಎಂದು ಹಾಡಿದಳು, ಮಗು ನಕ್ಕಿತು, ಇದನ್ನೇ ನೋಡುತ್ತ ಕುಳಿತ ನನಗೆ ತಾಯಿಯ ವಾತ್ಸಲ್ಯಕ್ಕೆ ಕಣ್ತುಂಬಿ ಬಂದಿರಲಿಲ್ಲವೇ.ಇಲ್ಲಿ ದುರ್ಯೋಧನನಿಗೆ ಕಾಡುತ್ತಿದ್ದ ಒಂಟಿತನದ ಮೇಲೆಯೇ ಈ ಎಲ್ಲ ನೆನಪುಗಳು ಒಂದೊದಾಗಿ ಸುರುಳಿ ಬಿಚ್ಚಿಕೊಳ್ಳುತ್ತಾ ಹೋಗುತ್ತವೆ. ಈ ನಡುವೆ ಅವನ ನೆರಳಿಗೆ ಅವನೇ ಬೆಚ್ಚಿ ಬೀಳುತ್ತಾನೆ. ಎದುರಿನ ರಕ್ತದ ಮಡುವಿನಲ್ಲಿ ಅವನದೇ ರೂಪವು ಘನಸರ್ಪವಾಗಿ ರೂಪು ತಳೆದು ಪ್ರೀತಿಯಿಂದ ಆಟವಾಡುತ್ತಿದ್ದ ಮೊಲಗಳನ್ನ ನುಂಗಲು ಹೋದದ್ದು ಮತ್ತೇಕೋ ಹಾಗೇ ಸುಮ್ಮನಾಗುತ್ತದೆ. ತನ್ನ ಇಂದಿನ ಈ ವರ್ತನೆಯ ಕಂಡು ಕೋಪವು ನನ್ನಲ್ಲಿ ಕಡಿಮೆಯಾಗುತ್ತಿದೆ, ಹಿಂದೆ ಅದೆಷ್ಟೋ ಮೊಲಗಳ ತಿಂದ ನಾನು, ಇವುಗಳ ಪ್ರೀತಿಯಾಟಕ್ಕೆ ಸೋತು, ಶಾಂತನಾಗಿ ಹೋದದ್ದು ಏಕೆಂದು ತನ್ನನ್ನು ತಾನೇ ವಿಮರ್ಶಿಸಿಕೊಳ್ಳುತ್ತ, ಪಶ್ಚಾತಾಪದ ನಗೆಯೊಂದನ್ನು ನಗುತ್ತಾನೆ.ಕವಿಯಿಲ್ಲಿ ಕೋಪ, ಹಿಂಸೆ, ಕ್ರೌರ್ಯಗಳು ಮೂರ್ತಿವೆತ್ತ ಹಾಗಿದ್ದ ದುರ್ಯೋಧನನಲ್ಲಿ ಅಹಿಂಸೆಯ ಬೀಜವನ್ನು ಸದ್ದಿಲ್ಲದೆ ಬಿತ್ತಿ ಅದನ್ನು ಕುಡಿಯೊಡೆಸಿ ಮರವನ್ನಾಗಿಸಲು ಹೊರಟಿರುವುದು ಕಾಣುತ್ತದೆ.

ಹೀಗೆ ಮುಂದುವರೆಯುತ್ತಿದ್ದ ದುರ್ಯೋಧನನಿಗೆ ಎದುರೊಂದು ಹೊಳೆವ ಹೃದಯಕವಚವು ಕಣ್ಣು ಕುಕ್ಕಿತು. ಆ ರತ್ನಖಚಿತವಾದ ಬೃಹತ್ಕಿರೀಟ, ಎದೆಪದಕವು ಏನಿರಬಹುದೆಂದು ನೋಡಲು ಮುಂದೆ ಬಾಗಿದನು. ಕಮಲ ಬಣ್ಣದ ವಸ್ತ್ರವನ್ನು ಧರಿಸಿದ್ದ ದಿವ್ಯಪುರುಷನೊಬ್ಬನು ಚಿನ್ನದ ಕೊಡದಲ್ಲಿ ಬೆಳದಿಂಗಳನ್ನು ಸುರಿಯುತ್ತಿದ್ದು, ಅದನ್ನು ಕೌರವನು ಬೊಗಸೆಯೊಡ್ಡಿ ಕುಡಿಯುತ್ತಿರುವ ದೃಶ್ಯ ಕಣ್ಣಿಗೆ ಕಂಡಿತು. ಇದು ಬೆಳದಿಂಗಳಲ್ಲ, "ಜೀವನ ಪ್ರೀತಿ ಮತ್ತು ಮನುಷ್ಯ ಪ್ರೀತಿ".ಮಕ್ಕಳಾಟದಲಿ ಎಲ್ಲರೂ ಸವಿಸುಖವನ್ನು ಉಂಡರೆ, ನಾನು ಮಾತ್ರ ಬರೀ ದ್ವೇಷದ ಜ್ವಾಲೆಯನ್ನ ಉಗುಳುತ್ತಿದ್ದೆನೆನ್ನುವ ಯೋಚನೆಗೆ ಬಿದ್ದ ದೊರೆಗೆ ಬಾಲ್ಯದ ನೆನಪುಗಳ ಎಳೆಎಳೆಯಾಗಿ ಬಿಚ್ಚಿಕೊಳ್ಳತೊಡಗಿದವು.

ಬೊಗಸೆಯೊಡ್ಡಿ ಕುಡಿಯುತ್ತಿದ್ದ ಬೆಳದಿಂಗಳ ಮನುಷ್ಯ ಪ್ರೀತಿಯು ಬೊಗಸೆಯಿಂದಾಚೆ ಚೆಲ್ಲಿದೊಡನೆ ತನ್ನ ಬೊಗಸೆಗೆ ಬೆಳದಿಂಗಳನು ಸುರಿಯುತ್ತಿದ್ದ ದಿವ್ಯಪುರುಷನು ನಕ್ಕು ಭೀಮನಾಗಿ ರೂಪಗೊಂಡನು. ಇದನ್ನು ಕಂಡೊಡನೆ ದುರ್ಯೋಧನನು ಕೋಪಗೊಂಡು ವೈಶಂಪಾಯನ

ಸರೋವರದತ್ತ ಬಿರುಸಿನ ಹೆಜ್ಜೆಗಳನ್ನಿಡಲು ತೊಡಗಿದನು.

ಮೊದಲು ಕೌರವನೊಳಗಿನ ಕೋಪದ ಉರಿಯನ್ನು ತಣ್ಣಗೆ ಮಾಡಿ ನಂತರ ಆತನಿಗೆ ದಿವ್ಯಪುರುಷನ ದರ್ಶನ ಮಾಡಿಸಿ, ಆಮೇಲೆ ತನ್ನ ಅಜನ್ಮ ವೈರಿಯಾದ ಭೀಮನ ಮುಖದರ್ಶನ ಮಾಡಿಸಿರುವುದು ಕವಿಯ ಜಾಣ್ಮೆಯಿಲ್ಲಿ ಎದ್ದು ಕಾಣುತ್ತದೆ.ಆತನೊಳಗಿನ ಕೋಪ, ದ್ವೇಷವನ್ನು ಅವನೇ ಅಳತೆ ಮಾಡಿಕೊಂಡು ಮನವರಿಕೆ ಮಾಡಿಕೊಳ್ಳುವಂತೆ ಕವಿ ಇಲ್ಲಿ ನೋಡಿಕೊಂಡಿದ್ದಾರೆ.

ವೈಶಂಪಾಯನ ಸರೋವರವನ್ನು ತಲುಪಿ, ತುಂಬಿ ತುಳುಕಾಡುತ್ತ, ದಡಕೆ ಅಪ್ಪಳಿಸುತ್ತಿದ್ದ ಅಲೆಗಳಿಗೆ ಮುಖ ಮಜ್ಜನಕ್ಕೆಂದು ಕೈಹಾಕಲು, ಮುಟ್ಟದಿರು ಕಾಡುಪಾಪಿ ಎನ್ನುವಂತೆ ಅಲೆಗಳು ಸರ್ರನೆ ಹಿಂದಕ್ಕೊಡಿದವು. ಮತ್ತೆ ಮತ್ತೆ ಬೊಗಸೆಯನು ನೀರಿನಲಿ ಮುಳುಗಿಸಲು, ನಾನು ನಿನಗಿಂತಲೇನು ಕಡಿಮೆಯಿಲ್ಲವೆಂದು ಸರೋವರದ ಅಲೆಗಳು ಹಿಂದು ಹಿಂದಕೆ ಸರಿಯುತ್ತಿದ್ದವು.ಹಠ ಬಿಡದ ಸುಯೋಧನ ಸರೋವರದ ನಡುಮಟ್ಟದ ನೀರಿನೊಳಕ್ಕಿಳಿದು ನಿಂತು ಮುಖ ತೊಳೆದು, ಬಾಯಿ ಮುಕ್ಕಳಿಸಿ, ನೀರು ಕುಡಿದನು.ನಂತರ ತಾನು ಇಲ್ಲಿನ ಪಾಪಲೋಕಕ್ಕೆ ಕಾಲನ್ನು ಇರಿಸಬೇಕೆಂದುಕೊಂಡಾಗಲೇ ಕೌರವನ ಕಣ್ಣಿಗೆ ನಂದನವನವೊಂದು ಕಂಡಿತು. ಮೂಲದಲ್ಲಿ “ ಇದು ಪಾತಾಳ ಲೋಕಕೆ ಬಾಗಿಲಿದು,ಘೋರಂದಾಕರಕೆ ಮಾಡಿದ ಕೂಪಂ “ ಎಂದಿದೆ.

ಇದು ಪಾಪಲೋಕವಲ್ಲ ಮಕ್ಕಳು ಮೈಮರೆತು ಆಡುವ ನಂದನವನವಿದು, ನಿಜಕ್ಕೂ ನೀನು ಅದೃಷ್ಟವಂತ,ಭೀಷ್ಮರ ಸಲಹೆಯ ಮೇರೆಗೆ ನೀನಿಲ್ಲಿಗೆ ಬಂದೆ, ನಿನ್ನೆಲ್ಲ ಪಾಪಗಳು ಇಲ್ಲಿಗೆ ಮುಕ್ತಾಯಗೊಂಡಂತೆಯೇ ಸರಿ. ಬಡವನೊಬ್ಬನು ತನಗರಿವಿಲ್ಲದೆ ಐಶ್ವರ್ಯದ ಆಗರವನ್ನು ಪ್ರವೇಶ ಮಾಡಿದಂತೆಯೇ ಆಯಿತು ನೀನಿಲ್ಲಿಗೆ ಬಂದದ್ದು ಎನ್ನುವಂತೆ ಕಾಣಿಸಿತು ಆ ನಂದನವನವು.

ಅಲ್ಲಿ ಆಡುತ್ತಿದ್ದ ಮಕ್ಕಳಿಬ್ಬರಲ್ಲಿ

" ಅರೆ ನಾನು! ಅವನು ಅವನೇ ಆ ಹೊಟ್ಟೆಬಾಕ ಭೀಮ ಎಂದಾ ಇಬ್ಬರಲಿ ಕಂಡನು ತಮ್ಮಿಬ್ಬರ "ಜೂಟಾಟದಲಿ ದುರ್ಯೋಧನನಿಗೆ ಭೀಮ ಸಿಗಲೊಲ್ಲ, ಛಲವಾದಿ ಕೌರವ ಬಿಡಲೊಲ್ಲ. ಹೀಗೆ ಭೀಮನನು ಹಿಡಿಯಲು ಕಷ್ಟ ಬಿದ್ದ ಬಾಲಕೌರವ ಮುನಿದು, ಬೈದು, ಉಗುಳಿ ಬಾಲಭೀಮನು ಹೊಡೆಯುವನೆಂದು ಅಳುತ ದೂರು ಕೊಡಲು ಓಡಿದನು.ಹೀಗೆ ಅಳುತ ಹೋದ ಬಾಲಕೌರವನನ್ನೇ ಕೋಪದಿಂದ ಹಿಂಬಾಲಿಸಿದ ಬಾಲಭೀಮನ ಹೊಡೆಯಲು ಚಿಮ್ಮಿದ ಬಾಲಕೌರವನು ಸರೋವರದ ಒಳಗೆ ಪ್ರವೇಶ ಮಾಡಿದನು.

ಹೀಗೆ ಸರೋವರದ ಒಳಹೊಕ್ಕ ಕೌರವನಿಗೆ ಭಾಗ್ಯವು ದೊರೆಯಿತು. " ಏಯ್ ದುರುಳ ದುರ್ಯೋಧನ ನೀನು ಪ್ರವೇಶ ಮಾಡಿರುವುದು ಯುದ್ಧ ಭೂಮಿಯನ್ನಲ್ಲ ಬದುಕಿನ ಸಿದ್ಧ ಭೂಮಿಯನ್ನ, ಇದು ನೀನು ಎಣಿಸಿದಂತೆ ಪಾಪಕೂಪದ ಬಾಗಿಲಲ್ಲ ನಿನ್ನ ಅದೃಷ್ಟದ ರಾಜಬಾಗಿಲೆಂದು ಕಿಚಪಿಚನೆ ಕಿಚಾಯಿಸಿದವು ಸರೋವರದೊಳಗಿದ್ದ ಅನಿಮಿಷ ತತಿಗಳು.

ಇಲ್ಲಿ ವೈಶಂಪಾಯನ ಸರೋವರವು ಬರೀ ಸರೋವರವಲ್ಲ, ಅದು ದುರ್ಯೋಧನನ ಪಾಪಗಳನ್ನು ತೊಳೆವ ಪವಿತ್ರ ಗಂಗೆಯಾಗಿ ಕಂಡು ಬರುತ್ತಿದೆ. ಇಂತಹ ಗಂಗೆಯ ಪವಿತ್ರ ತೀರ್ಥದಲ್ಲಿ ಮಿಂದು ನಿನ್ನೆಲ್ಲ ಪಾಪಗಳನ್ನು ಕಳೆದು ಕೊಂಡಿರುವೆ ಎಂದು ಅಲ್ಲಿದ್ದ ಜಲಚರ ಜೀವಿಗಳ ಮಾತು ಅದ್ಭುತವೆನಿಸುತ್ತದೆ. ಅಲ್ಲೊಂದು ನಂದನವನ ಅದರಲ್ಲಿ ಆಟವಾಡುವ ಮಕ್ಕಳಿಬ್ಬರು ಅವರಲ್ಲಿ ಒಬ್ಬ ಬಾಲಕೌರವ, ಇನ್ನೊಬ್ಬ ಬಾಲಭೀಮ, ಜೂಟಾಟ, ಮತ್ತದೇ ಕೋಪ, ದೂರು, ಪ್ರತಿದೂರು ಇವು ಬಾಲ್ಯದಲ್ಲಿ ಮಕ್ಕಳ ಸಹಜ ಸ್ವಭಾವವಾಗಿರುತ್ತದೆ. ಸೋತಾಗ ಅಳುವುದು, ಗೆದ್ದಾಗ ಕುಣಿದು ಕುಪ್ಪಳಿಸುವುದು ಇಂತಹ ಯಾವೊಂದು ಸಹಜ ಮಕ್ಕಳ ನಡವಳಿಕೆಯನ್ನು ಭೀಮ, ದುರ್ಯೋಧನರು ಒಟ್ಟಾಗಿ ಬಾಲ್ಯದಲ್ಲಿ ಕಂಡು,ಅನುಭವಿಸಿದವರಲ್ಲ. ಬರೀ ಸಿಟ್ಟು, ಸೇಡವು, ಮುನಿಸಿ, ದ್ವೇಷಗಳಿಂದ ತುಂಬಿ ಹೋದ ಬಾಲ್ಯವನ್ನು ಕಳೆದು, ಅದನ್ನೇ ಅನಂತರವೂ ತಮ್ಮೊಳಗೆ ಸಮೃದ್ಧವಾಗಿ ಬೆಳೆಸಿಕೊಂಡವರು. ಇಲ್ಲಿ ಕವಿಯು ಬಾಲ್ಯ, ಯೌವ್ವನದಲ್ಲಾದ ತಪ್ಪುಗಳಿಗೆ ಮಾನವನು ವಯಸ್ಸು ಮಾಗಿದಂತೆ ಅವುಗಳಿಗೆ ತಾನೇ ಪಶ್ಚಾತಾಪದ ಶಿಕ್ಷೆಯನ್ನು ಕೊಟ್ಟುಕೊಳ್ಳುತ್ತಾನೆ ಎನ್ನುವುದನ್ನು ಕಣ್ಣಿಗೆ ಕಟ್ಟುವಂತೆ ಚಿತ್ರೀಸಿರುವುದು ಸೊಗಸಾಗಿದೆ.

ಇಂತಹ ಹತ್ತು ಹಲವು ಮಾರ್ಪಡುಗಳೊಂದಿಗೆ ಕಾವ್ಯವು ತನ್ನ ಹಾದಿಯಲ್ಲಿ ಸಾಗುತ್ತಲೇ, ಓದುಗರಿಗೆ ಹೊಸದೊಂದು ಜಗತ್ತಿನ ಪರಿಚಯ ಮಾಡಿಸುತ್ತದೆ. ಇಲ್ಲಿ ನಾವು ಗಮನಿಸಬೇಕಾದ ಬಹುಮುಖ್ಯವಾದ ಅಂಶವೆಂದರೆ ರಾಜಪ್ರಭುತ್ವವನ್ನೇ ಧಿಕ್ಕರಿಸಿ ಜನರ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಬಂದ ಬುದ್ಧ, ಮತ್ತೆಂದೂ ರಾಜನಾಗದೆ, ಸನ್ಯಾಸಿಯಾಗಿ, ಜ್ಞಾನಿಯಾಗಿ ಸಾಮಾನ್ಯರಲ್ಲಿ ಸಾಮಾನ್ಯನಾಗಿ ಅರಿವಿನ ದೀವಿಗೆ ಹಿಡಿದು ಜನರನ್ನು ಜ್ಞಾನಪಥದತ್ತ ಕೊಂಡೊಯ್ಯುವ ಕೆಲಸವನ್ನು ಮಾಡುತ್ತಾನೆ. ಬುದ್ಧ ಅಂದು ಹಾಕಿಕೊಟ್ಟ ಆ ಶಾಂತಿಪಥದಲ್ಲಿ ಅಂದಿನಿಂದ ಇಂದಿನವರೆಗೂ ಸಹಸ್ರಾರು ಜನರು ಸಾಗಿ, ಸಾಧಿಸಿ, ಜನರಿಗೆ ಅದನ್ನು ಉಣಬಡಿಸಿ ಹೋದವರೇ ಎನ್ನುವ

ಸತ್ಯವನ್ನಿಲ್ಲಿ ಕವಿ ಓದುಗರಿಗೆ ಮನದಟ್ಟು ಮಾಡಿಕೊಟ್ಟಿದ್ದಾರೆ.

**ಪರಾಮರ್ಶನ ಗ್ರಂಥಗಳು**

೧. ಬುದ್ಧ ಭಾರತ ಕಾವ್ಯ, ನಾಗರಾಜ್ ತಲಕಾಡು, ಯದುನಂದನ ಪ್ರಕಾಶನ, ಚನ್ನರಾಯಪಟ್ಟಣ
೨. ದೊರೆ ದುರ್ಯೋಧನ, ರಾ. ಗೌ, ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್.
೩. ಕವಿ ಚಕ್ರವರ್ತಿ ಕವಿರನ್ನ ವಿರಚಿತಂ ಸಾಹಸ ಭೀಮ ವಿಜಯಂ – ಸಂಪಾದಕರು ಆರ್. ವಿ ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
4. ಗದಾಯುದ್ಧ ನಾಟಕಂ. ಬಿ. ಎಂ. ಶ್ರೀ, ಸ್ವಪ್ನ ಬುಕ್ ಹೌಸ್, ಬೆಂಗಳೂರು.